

■ ಪ್ರಭಾಕರ ಶಿಶಿಲ
ಕಲೆ: ರಘುಪತಿ ಶೃಂಗೇರಿ

ಅವಳು ಕಿಟಕಿಯಿಂದ ಹೊರಗಿನ ಕತ್ತಲನ್ನು ನೋಡುತ್ತಿದ್ದಳು. ಮನೆಯ ಲೈಟನ್ನು ಆರಿಸಿ ಕತ್ತಲಲ್ಲಿ ನಿಂತು ಕತ್ತಲನ್ನು ನೋಡುವುದನ್ನು ಅವಳು ಅಭ್ಯಾಸ ಮಾಡಿಕೊಂಡಿದ್ದಳು. ಹೊರಗಿನ ಕತ್ತಲೆಯಿಂದ ಎದ್ದು ಬಂದವನೊಬ್ಬ ಒಳಗಿನ ಕತ್ತಲೆಯನ್ನು ಹೋಗಲಾಡಿಸಬಾರದೇ ಎಂದು ಹಂಬಲಿಸುತ್ತಿದ್ದಳು. ಮದುವೆಯಾಗಿ ಮೂರು ವರ್ಷಗಳು ಉರುಳಿವೆ. ಎಷ್ಟೊಂದು ಕತ್ತಲ ರಾತ್ರಿಗಳನ್ನು ಹಾಗೆ ಕಳೆದಿಲ್ಲ? ಗಂಡ ಸೋಮಯ್ಯ ಬೆಂಗಳೂರಿನಲ್ಲಿರುತ್ತಿದ್ದುದೇ ಹೆಚ್ಚು. ಮುತ್ತಮ್ಮ ಇಲ್ಲಿ ಹಗಲಲ್ಲಿ ಎಸ್ಟೇಟು ನೋಡಿಕೊಳ್ಳಬೇಕು. ರಾತ್ರಿ ಆ ದೊಡ್ಡ ಬಂಗಲೆಯಲ್ಲಿ ಒಬ್ಬಳೇ ಕಾಲ ಕಳೆಯಬೇಕು. ಅವನಿದ್ದಾಗಲೂ ಸೂರ್ಯನ ಬೆಳಕು ಬೀಳದ ಕತ್ತಲೆಯಲ್ಲಿ ಅವನಿಂದ ಮಿಂಚು ಮೂಡಿಸಲು ಆಗುತ್ತಿರಲಿಲ್ಲ. ಸೋಮಯ್ಯನಿಗೆ ಆ ಬಂಗಲೆ ಬಗ್ಗೆ ಹೇಳಿಕೊಳ್ಳುವುದೆಂದರೆ ಹೆಮ್ಮೆ.

'ಇದು ಬ್ರಿಟಿಷರಿಗೆ ಸೇರಿದ್ದು. ಚಿಕ್ಕವೀರ ದೊರೆಗಳ ಬಳಿಕ ವಿಲಾಯತಿಯವರು ಈ ಭಾಗದಲ್ಲಿ ನೆಲೆಯೂರಿ ಎಸ್ಟೇಟು ಮಾಡಿಕೊಂಡರಲ್ಲಾ? ನನ್ನ ಮುತ್ತಜ್ಜ ಇಲ್ಲಿ ಕಾರ್ಯಸ್ಥರಾಗಿದ್ದರು. ವಿಲಾಯತಿ ದೊರೆಗೆ ಅವನೆಂದರೆ ತುಂಬಾ ನಂಬಿಕೆ. ನಮ್ಮ ಮುತ್ತಜ್ಜಿ ಗೌರಮ್ಮ ಸಾಕ್ಷಾತ್ ರಂಭೆಯಂತಹ ಹೆಣ್ಣಂತೆ. ವಿಲಾಯತಿ ದೊರೆ ಇಲ್ಲೇ ಮೂವತ್ತು ವರ್ಷ ಕಳೆದನಂತೆ. ಇಂಗ್ಲೆಂಡಿಗೆ ಹೋಗುವಾಗ ಈ ಬಂಗಲೆ ಈ ಎಸ್ಟೇಟು ಮುತ್ತಜ್ಜಿಗೆ ಕೊಟ್ಟು ಹೋದನಂತೆ. ಆಹಾ ನಮ್ಮ ಮುತ್ತಜ್ಜಿಯ ಭಾಗ್ಯವೇ? ಕೊನೆ ಕೊನೆಗೆ ಅವನು ಇಂಗ್ಲಿಷಲ್ಲೇ ಎಲ್ಲವನ್ನೂ ವಿವರಿಸುತ್ತಿದ್ದ. ಇಂಗ್ಲಿಷರ ಹಾವಭಾವದೊಡನೆ ಉಚ್ಚಾರವನ್ನೂ ಅನುಕರಿಸುತ್ತಿದ್ದ. ಆ ಬಂಗಲೆಯಲ್ಲಿ ಯಾವುದಕ್ಕೂ ಕಡಿಮೆಯಿರಲಿಲ್ಲ, ಟಿ.ವಿ., ಫೋನು, ಫ್ರಿಜ್ಜು, ಹಗಲು ಕೆಲಸದಾಳುಗಳು, ಎಸ್ಟೇಟು ಕಾವಲಿಗೆ ಗೂರ್ಖಾ, ಹುಲಿಯೆತ್ತರದ ಎರಡು ಆಲ್ಸೇಶಿಯನ್ನು. ಸೋಮಯ್ಯ ಬೆಂಗಳೂರಿಗೆ ಹೋದಾಗ ರಾತ್ರೆ ಅವಳಿಗೆ ಬೇಸರ ನೀಗಲು ಕೆಲಸದ ಮುದುಕಿಯೊಬ್ಬಳು ಬರುತ್ತಾಳೆ. ಅವಳು ಮಾತು ಶುರು ಮಾಡುವುದೇ 'ನಿನ್ನ ಪ್ರಾಯದಲ್ಲಿ ನಾನು...' ಎಂದು. ಅವಳ ಯೌವನದ ಸಾಹಸಗಳನ್ನು ಮುತ್ತಮ್ಮ ಕಣ್ಣರಳಿಸಿ ಕೇಳುತ್ತಾಳೆ. ಅಸಹನೆ ಹೆಚ್ಚಾದಾಗ 'ಸಾಕು ನಿಲ್ಲಿಸು, ಬೇರೇನಾದರೂ ಮಾತಾಡು' ಎನ್ನುತ್ತಾಳೆ. ಮುದುಕಿ ಯಾವ್ಯಾವುದೋ ಕತೆಗಳನ್ನು, ಒಗಟುಗಳನ್ನು ಹೇಳಿ ಮುತ್ತಮ್ಮನನ್ನು ಗೆಲುವಾಗಿರಿಸಲು ಪ್ರಯತ್ನಿಸುತ್ತಾಳೆ.

'ನೀನು ತುಂಬಾ ಓದಿದವಳಲ್ವಾ? ಒಂದು ಒಗಟು ಹೇಳುತ್ತೇನೆ. 'ಕೇಳಿಸಿಕೋ, ಅದ್ರೊಳಗೆ ಇದು ಅಲ್ಲಾಡುತ್ತದೆ. ಕೇಳಿಸ್ಕೊಂಡೆಯಾ? ಉತ್ತರ ಹೇಳು'.

ಮುತ್ತಮ್ಮ ಗೊತ್ತಿಲ್ಲವೆಂದು ತಲೆಯಾಡಿಸಿದಳು.

'ಹಾಗಾದರೆ ಇನ್ನೊಂದು ಒಗಟು. 'ಚಡ್ಡಿ ಜಾರಿಸಿದ. ಗಬ್ಬಕ್ಕನೆ ತೂರಿಸಿದ. ಇದಕ್ಕಾದ್ರೂ ಉತ್ತರ ಹೇಳು'. ಮುತ್ತಮ್ಮನಿಗೆ ಉತ್ತರ ಗೊತ್ತಾಗಲಿಲ್ಲ.

'ಇದು ಕೊನೆಯದ್ದು. ಉತ್ತರ ನಿಂಗೆ ಖಂಡಿತಾ ಗೊತ್ತಿದೆ. ಕೇಳಿಸ್ಕೋ. ಅಳು ಗಿಳು ಯಾವಾಗ? ಅರ್ಧ ಒಳಕ್ಕೋದಾಗ. ನಗು ಗಿಗು ಯಾವಾಗ? ಪೂರ್ತಿ ಒಳಕ್ ಹೋದಾಗ, ಏನದು?'

ಮುತ್ತಮ್ಮನಿಗೆ ಸಿಟ್ಟು ಬಂತು. 'ಬರೇ ಬಿಕನಾಸಿ ಮುದುಕಿ ನೀನು. ನಿನ್ನ ಬಾಯಿಂದ ಒಂದೂ ಒಳ್ಳೆಯದು ಬರೋದಿಲ್ಲ'.

ಮುದುಕಿ ನಕ್ಕಿತು. 'ನಾನೇನು ನಿನ್ನ ಹಾಗೆ ಓದಿದೋಳಾ? ಅಮ್ಮ ಕಲಿಸಿ ಕೊಟ್ಟ ಒಗಟು ಇವು. ಅದ್ರೊಳಗೆ ಇದು ಅಲ್ಲಾಡುತ್ತದೆ ಅಂದ್ರೆ ಗಂಟೆಯೊಳಗೆ ಅದರ ಕೋಲು ಅಲ್ಲಾಡೋದು. ಚಡ್ಡಿ ಜಾರಿಸಿ ಗಬಕ್ಕನೆ ತೂರಿಸೋದು ಅಂದ್ರೆ ಬಾಳೆಹಣ್ಣು ಸುಲಿದು ತಿನ್ನೋದು. ಬಳೆಗಾರ ಬಳೆ ತೊಡಿಸುವಾಗ ಆರಂಭದಲ್ಲಿ ನೋವಾಗಿ ಕಣ್ಣೀರು ಬರುತ್ತಲ್ಲಾ? ಅದು ಅರ್ಧ ಒಳಕ್ ಹೋದಾಗಿನ ನೋವು. ತೊಟ್ಟ ಮೇಲೆ ಎಷ್ಟು ಖುಷಿಯಾಗುತ್ತೆ ನೋಡು. ಅದು ಪೂರ್ತಿ ಒಳಕ್ ಹೋದಾಗಿನ ಸುಖ. ನಾನೇನು ಕೆಟ್ಟದ್ದು ಹೇಳಿದ್ದೀನಾ?'

ಮುತ್ತಮ್ಮನಿಗೆ ನಗು ಬಂತು. ಈಗ ಮುದುಕಿಯೂ ಗೆಲುವಾದಳು. 'ನೋಡಮ್ಮಾ, ನೀನಿನ್ನೂ ಎಳೆ ಪ್ರಾಯದೋಳು. ಮೂರು ವರ್ಷವಾದರೂ ಈ ಮನೆಯಲ್ಲಿ ಮಗುವಿನ ಕೇಕೆ ಕೇಳಿಸಿಲ್ಲ. ದಣಿ ಸೋಮಯ್ಯ ಕಂಡಲೆಲ್ಲಾ ಕೈಯಾಡಿಸ್ತಾನೆ. ಸಿಕ್ಕಿದ್ದನ್ನೆಲ್ಲಾ ಮೇಯ್ತಾನೆ. ನೀನು ರಾತ್ರೆಗಳನ್ನು ಸುಮ್ನೆ ಕಳೀತೀಯಾ. ನಾನು ನಿನ್ನ ಹಾಗಿರುವಾಗ... ಬೇಡ. ನಿನ್ನ ಹೊಟ್ಟೆ ಉರಿಸೋದು ನಂಗಿಷ್ಟವಿಲ್ಲ. ಒಂದು ಮಾತು ನಿಜ. ಯೌವನದಲ್ಲಿ ಉಂಡದ್ದೇ ಬಂತು. ಯಾವಾಗ ಅದು ನಿಂತು ಹೋಯ್ತೋ, ಜೀವನಾನೇ ನಿಂತು ಹೋದ ಹಾಗೇ. ಮುತ್ತಮ್ಮ ಮತ್ತೊಮ್ಮೆ ಕಿಟಕಿಯ ಹೊರಗಿನ ಕತ್ತಲನ್ನು ನೋಡಿದಳು. ಇಂದು ರಾತ್ರಿ ತಾನೊಬ್ಬಳೇ ಬ್ರಿಟಿಷ್ ದೊರೆಯಿಂದ ಸೋಮಯ್ಯನ ಮುತ್ತಜ್ಜಿ ಪಡೆದ ಬಂಗಲೆಯಲ್ಲಿ ಕಳೆಯಬೇಕು. ಮುದುಕಿಯ ಮನೆಯಲ್ಲಿ ಸತ್ತೋರಿಗೆ ಬಡಿಸೋದು.

'ನಮ್ಮ ಹಿರಿಯರು ಸತ್ತು ಹೋದೋರೆಲ್ಲಾ ಎಲ್ಲಿಗೂ ಹೋಗೋದಿಲ್ಲ. ಇಲ್ಲೇ ನಂ ಜತೆಯಲ್ಲೇ ಇರ್ತಾರೆ, ಅವ್ರಿಗೆ ವರ್ಷಕ್ಕೊಮ್ಮೆ ಅವರ ಇಷ್ಟದ್ದನ್ನು ಮಾಡಿ ಹಾಕ್ತೀವೆ. ನಾಳೆ ನಾನು ಸತ್ರೆ ನಂಗೂ'. ಮುದುಕಿ ನಿನ್ನೆ ರಾತ್ರಿ ಹೇಳಿದ್ದಳು. ಅವಳಿದ್ದರೆ ಮಾತಿನಲ್ಲಿ ಹೊತ್ತು ಹೋಗುತ್ತಿತ್ತು. ಒಬ್ಬಳೇ ಊಟ ಮಾಡಲು ಮನಸ್ಸೇ ಬರುತ್ತಿಲ್ಲ. ಒಂದು ವಾರವಾಯ್ತು ಸೋಮಯ್ಯ ಬೆಂಗಳೂರಿಗೆ ಹೋಗಿ. ಪ್ರತಿ ರಾತ್ರಿ ಅವನಿಗೆಂದು ಜೋಪಾನವಾಗಿರಿಸಿದ್ದು ವ್ಯರ್ಥವಾಗುತ್ತದೆ. ಕತ್ತಲಿಂದ ಎದ್ದು ಬರುವವನೊಬ್ಬ ಸೂರ್ಯ ಕಿರಣ ಸೋಂಕದ ಇಲ್ಲಿನ ಕತ್ತಲನ್ನು ದೂರ ಮಾಡಬಾರದೇ? ಹೊರಗೆ ಜರ್‍ರೋ ಎಂದು ಮಳೆ ಸುರಿಯತೊಡಗಿತು. ಎಸ್ಟೇಟಿನಿಂದ ಕ್ರಿಮಿಕೀಟಗಳ, ಹುಳ ಹುಪ್ಪಡಿಗಳ, ಜೀರುಂಡೆಗಳ ಸಂಗೀತ, ಅದರ ಮಧ್ಯೆ ಅಸ್ಪಷ್ಟವಾಗಿ ವಾಹನದ ಶಬ್ದ ಕೇಳಿಸಿತು.

ಸೋಮಯ್ಯ ಚವರ್ಲೈಟು ಕಾರು ಕೊಂಡುಹೋಗಿದ್ದಾನೆ. ಅದೇ ಬರುತ್ತಿರಬಹುದೇ? ಅದು ವಾಹನದ ಸದ್ದೇ ಅಥವಾ ಕೇವಲ ತನ್ನ ಭ್ರಮೆಯೇ? ಹಾಳಾಗಿ ಹೋಗಲಿ. ಅದು ಭ್ರಮೆಯೇ ಇರಬೇಕು. ಈ ಕತ್ತಲೆ ಇನ್ನು ಸಾಕು ಎಂದು ಗೇಟಿನ ಲೈಟು ಹಾಕಿದಳು. ಮಳೆಗೆ ಒದ್ದೆಯಾಗಿ ಗೂಡು ಸೇರಿದ್ದ ಆಲ್ಸೇಶಿಯನ್‌ಗಳು ಒಮ್ಮೆ ಬೊಗಳಿ ಸುಮ್ಮನಾದವು. ಗೂರ್ಖನೆಲ್ಲೋ ಎಸ್ಟೇಟಿನ ಗರ್ಭದಲ್ಲಿದ್ದಾನೆ. ಮತ್ತೆ ವಾಹನದ ಶಬ್ದ ಕೇಳಿಸಿದಂತಾಯಿತು. ಅವಳು ಮತ್ತೊಮ್ಮೆ ಕಿಟಕಿಯ ಬಳಿಗೆ ಬಂದಳು. ಗೇಟಿನ ಲೈಟ್‌ನಿಂದಾಗಿ ಹೊರಗಿನ ಕತ್ತಲೆ ಭಯ ಹುಟ್ಟಿಸುವಂತಿರಲಿಲ್ಲ. ದೂರದಿಂದ ವಾಹನವೊಂದರ ಹೆಡ್‌ಲೈಟು ಕಾಣಿಸಿತು. ಸೋಮಯ್ಯನ ಕಾರೇ? ಕಾರು ಎಂದಾದರೆ ಎರಡು ಹೆಡ್‌ಲೈಟ್‌ಗಳಿರಬೇಕಿತ್ತು. ದೂರದಿಂದಲೇ ಹಾರನ್ನು ಹಾಕುವುದು ಅವನ ಅಭ್ಯಾಸ. ಇದು ಯಾರದೋ ಬೈಕು ಇರಬೇಕು. ಈ ಕತ್ತಲಲ್ಲಿ, ಮಳೆಯಲ್ಲಿ ಒದ್ದೆಯಾಗಿಕೊಂಡು ಬರುತ್ತಿರುವವರು ಯಾರಿರಬಹುದು? ಅಪ್ಪನಿಗೆ ಏನಾದರೂ ಸಂಭವಿಸಿತೆ?

ವಾಹನ ಗೇಟಿನ ಬಳಿ ನಿಂತಿತು. ಅದೊಂದು ಆಟೊ. ಅದರಿಂದ ಇಳಿದಾತ ಡ್ರೈವರಿಗೆ ಹಣ ಕೊಟ್ಟು ಮನೆಯತ್ತ ಬರತೊಡಗಿದ. ಯಾರಿರಬಹುದು? ಅವಳು ವರಾಂಡಾದ ಲೈಟು ಹಾಕಿದಳು. ಓ, ಭೀಮಯ್ಯ ಬರುತ್ತಿದ್ದಾನೆ! ಅವಳ ಮನಸ್ಸು ಗರಿಗೆದರಿ ಹಾರಿತು. ಬಾಗಿಲು ತೆಗೆದು ಒಂದೇ ಹಾರಿನಲ್ಲಿ ಅಂಗಳಕ್ಕೆ ಬಂದಳು. ಅಪರಿಚಿತನನ್ನು ಕಂಡು ಬೊಗಳಿದ ನಾಯಿಗಳನ್ನು ಗದರಿ ಸುಮ್ಮನಾಗಿಸಿದಳು.

"ಒಂದು ಫೋನಾದ್ರೂ ಮಾಡಿ ಬರ್ಬಾರ್ದಿತ್ತೇನೋ ಭೀಮೂ' ಎಂದು ಅವನ ಬೆನ್ನಿಗೊಂದು ಗುದ್ದಿದಳು.

'ಮಳೆಗೆ ಕಾವೇರಿ ಕಟ್ಟಿಕೊಂಡಿದ್ದಾಳೆ. ರಾತ್ರೆ ದೋಣಿ ಬಿಡೋದಿಲ್ಲ ಎಂದು ಅಂಬಿಗ ಹೇಳಿದ. ಇನ್ನೇನು ಮಾಡೋದು. ನಿನ್ನ ನೆನಪಾಗಿ ಇಲ್ಲಿಗೆ ಬಂದುಬಿಟ್ಟೆ. ಮಲಕೊಳ್ಳೋಕೆ ಜಾಗ ಕೊಟ್ರೆ ಕತ್ತಲೆ ಕಳೆಯುತ್ತದೆ.